Kerala Gazette No. 32 dated 11th August 2020.

**PART I** **Section iii**

# ಕೇರಳ ಸರಕಾರ

## ಕಾನೂನು (ಶಾಸನ ರಚನೆ-ಬಿ) ಇಲಾಖೆ

## ಅಧಿಸೂಚನೆ

*2018 ಫೆಬ್ರವರಿ 12,*

ನಂಬ್ರ 23950/ಲೆಗ್. ಬಿ2/2017/ಕಾನೂನು. *ತಿರುವನಂತಪುರಂ,* *1193 ಮಕರ 29/*

*1939 ಮಾಘ 23.*

2017 ಫೆಬ್ರವರಿ 12ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗುವುದು.

ರಾಜ್ಯಪಾಲರ ಆಜ್ಞಾಪ್ರಕಾರ,

**ಬಿ. ಜಿ. ಹರೀಂದ್ರನಾಥ್,**

*ಕಾನೂನು ಕಾರ್ಯದರ್ಶಿ.*

## 2018ರ 11ನೇ ನಂಬ್ರ ಅಧ್ಯಾದೇಶ

## 2018ರ ಕೇರಳ ಲೋಕ ಸೇವಾ ಆಯೋಗ (ವಕ್ಫ್ ಬೋರ್ಡಿನ ಕೆಳಗಿನ ಸೇವೆಗಳಿಗೆ ಸಂಬಂಧಿಸಿ ಹೆಚ್ಚುವರಿ ಕರ್ತವ್ಯಗಳು) ಅಧ್ಯಾದೇಶ

ಭಾರತ ಗಣರಾಜ್ಯದ ಅರುವತ್ತೊಂಭತ್ತನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

ವಕ್ಫ್ ಬೋರ್ಡಿನ ಕೆಳಗಿನ ಆಡಳಿತಾತ್ಮಕ ಸೇವೆಗಳಿಗೆ ಸಂಬಂಧಿಸಿ ಕೇರಳ ಲೋಕ ಸೇವಾ ಆಯೋಗವು ಕೆಲವು ಹೆಚ್ಚುವರಿ ಕರ್ತವ್ಯಗಳನ್ನು ವಿನಿಯೋಗಿಸುವುದಕ್ಕೆ ವ್ಯವಸ್ಥೆಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ.—2017ರ ಕೇರಳ ಲೋಕ ಸೇವಾ ಆಯೋಗ (ವಕ್ಫ್ ಬೋರ್ಡಿನ ಕೆಳಗಿನ ಸೇವೆಗಳಿಗೆ ಸಂಬಂಧಿಸಿ ಹೆಚ್ಚುವರಿ ಕರ್ತವ್ಯಗಳು) ಅಧ್ಯಾದೇಶ (2017ರ 29)ವನ್ನು 2017 ಡಿಸೆಂಬರ್ 11ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿರುವುದರಿಂದಲೂ;

2018 ಜನವರಿ 22ನೇ ದಿನಾಂಕದಂದು ಆರಂಭವಾಗಿ 2018 ಫೆಬ್ರವರಿ 7ನೇ ದಿನಾಂಕದಂದು ಮುಕ್ತಾಯಗೊಂಡ ಕೇರಳ ರಾಜ್ಯ ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತುತ ಅಧ್ಯಾದೇಶದ ಬದಲು ರಾಜ್ಯ ವಿಧಾನಸಭೆಯ ಒಂದು ಅಧಿನಿಯಮವನ್ನು ತರುವುದಕ್ಕಿರುವ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಲು ಹಾಗೂ ಅಂಗೀಕರಿಸಲು ಸಾಧ್ಯವಾಗದುದರಿಂದಲೂ;

ಭಾರತ ಸಂವಿಧಾನದ 213ನೇ ಅನುಚ್ಛೇದದ (2)ನೇ ಖಂಡದ ಉಪ-ಖಂಡ (ಎ) ಪ್ರಕಾರ ಪ್ರಸ್ತುತ ಅಧ್ಯಾದೇಶದ ಪ್ರಾಬಲ್ಯವು 2018 ಮಾರ್ಚ್ 5ನೇ ದಿನಾಂಕದಂದು ಮುಕ್ತಾಯವಾಗುವುದರಿಂದಲೂ;

ಪ್ರಸ್ತುತ ಅಧ್ಯಾದೇಶದ ನಿಬಂಧನೆಗಳನ್ನು ಜಾರಿಯಲ್ಲಿರಿಸದಿದ್ದಲ್ಲಿ ತೊಂದರೆಗಳು ಉಂಟಾಗಬಹುದಾದುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದ ಹಾಗು ತಾನು ತುರ್ತು ಕ್ರಮ ಕೈಗೊಳ್ಳುವ ಅವಶ್ಯಕವಾದ ಸನ್ನಿವೇಶವು ಜಾರಿಯಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ, ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2018ರ ಕೇರಳ ಲೋಕ ಸೇವಾ ಆಯೋಗ (ವಕ್ಫ್ ಬೋರ್ಡಿನ ಕೆಳಗಿನ ಸೇವೆಗಳಿಗೆ ಸಂಬಂಧಿಸಿ ಹೆಚ್ಚುವರಿ ಕರ್ತವ್ಯಗಳು) ಅಧ್ಯಾದೇಶವೆಂದು ಕರೆಯಬಹುದು.

(2) ಇದು ಗಜೆಟ್ ಅಧಿಸೂಚನೆಯ ಮುಖೇನ, ಸರಕಾರ ನಿಗದಿಪಡಿಸುವ ದಿನಾಂಕದಂದು ಜಾರಿಗೆ ಬರುವುದಾಗಿದೆ.

2. ನಿರ್ವಚನಗಳು.—ಈ ಅಧ್ಯಾದೇಶದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದಿದ್ದಲ್ಲಿ,—

(ಎ) "ಸರಕಾರ" ಎಂದರೆ, ಕೇರಳ ಸರಕಾರ ಎಂದರ್ಥ;

(ಬಿ) "ಲೋಕ ಸೇವಾ ಆಯೋಗ" ಎಂದರೆ, ಕೇರಳ ಲೋಕ ಸೇವಾ ಆಯೋಗ ಎಂದರ್ಥ;

(ಸಿ) "ಸೇವೆಗಳು" ಎಂದರೆ, ವಕ್ಫ್ ಬೋರ್ಡಿನ ಕೆಳಗಿನ ಸೇವೆಗಳು ಎಂದರ್ಥ;

(ಡಿ) "ವಕ್ಫ್ ಬೋರ್ಡು" ಎಂದರೆ, 1995ರ ವಕ್ಫ್ ಅಧಿನಿಯಮ (1995ರ 43ನೇ ಕೇಂದ್ರ ಅಧಿನಿಯಮ)ದ 13ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ರೂಪೀಕರಿಸಿದ ಕೇರಳ ರಾಜ್ಯ ವಕ್ಫ್ ಬೋರ್ಡು ಎಂದರ್ಥ.

3. ವಕ್ಫ್ ಬೋರ್ಡಿನ ಕೆಳಗಿನ ಆಡಳಿತಾತ್ಮಕ ಸೇವೆಗಳಿಗೆ ಸಂಬಂಧಿಸಿ ಲೋಕ ಸೇವಾ ಆಯೋಗದ ಕರ್ತವ್ಯಗಳು.—(1) ವಕ್ಫ್ ಬೋರ್ಡಿನ ಅಧಿಕಾರಿಗಳ ಹಾಗೂ ನೌಕರರ ನೇಮಕಾತಿ ಹಾಗೂ ಸೇವಾ ಷರತ್ತುಗಳಿಗೆ ಸಂಬಂಧಿಸಿ ಯಾವುದೇ ಅಧಿನಿಯಮದಲ್ಲೋ ನಿಯಮಗಳಲ್ಲೋ ರೆಗ್ಯುಲೇಷನ್‌ಗಳಲ್ಲೋ ಏನೇ ಒಳಗೊಂಡಿದ್ದರೂ, ವಕ್ಫ್ ಬೋರ್ಡಿನ ಆಡಳಿತಾತ್ಮಕ ಸೇವೆಗಳಲ್ಲಿನ ಅಧಿಕಾರಿಗಳನ್ನು ಹಾಗು ನೌಕರರನ್ನು ನೇರ ನೇಮಕಾತಿ ಮುಖೇನ ನೇಮಿಸುವುದಕ್ಕೆ ಇಸ್ಲಾಂ ಮತದ ಉದ್ಯೋಗಾರ್ಥಿಗಳ ಸೆಲೆಕ್ಟ್ ಲಿಸ್ಟನ್ನು ಸಿದ್ಧಪಡಿಸುವುದು ಲೋಕ ಸೇವಾ ಆಯೋಗದ ಕರ್ತವ್ಯವಾಗಿರುವುದು.

(2) ವಕ್ಫ್ ಬೋರ್ಡು ಲೋಕ ಸೇವಾ ಆಯೋಗದೊಂದಿಗೆ,—

(ಎ) ವಕ್ಫ್ ಬೋರ್ಡಿನ ಕೆಳಗಿನ ಆಡಳಿತಾತ್ಮಕ ಸೇವೆಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲೂ;

(ಬಿ) ವಕ್ಫ್ ಬೋರ್ಡಿನ ಕೆಳಗಿನ ಆಡಳಿತಾತ್ಮಕ ಸೇವೆಗಳ ಹುದ್ದೆಗಳಿಗೆ ನೇರ ನೇಮಕಾತಿ ಮುಖೇನ ನೇಮಕಾತಿ ಮಾಡುವುದಕ್ಕೆ ಪಾಲಿಸಬೇಕಾದ ತತ್ವಗಳ ಕುರಿತು ಹಾಗು ಅಂತಹ ನೇಮಕಾತಿಗಿರುವ ಉದ್ಯೋಗಾರ್ಥಿಗಳ ಯೋಗ್ಯತೆಗೆ ಸಂಬಂಧಿಸಿಯೂ;

ಸಮಾಲೋಚಿಸಬಹುದಾಗಿದೆ ಹಾಗೂ ಆ ರೀತಿ ಸಮಾಲೋಚಿಸಲ್ಪಡುವ ಯಾವುದೇ ವಿಷಯದ ಕುರಿತು ಸಲಹೆ ನೀಡುವುದು ಲೋಕ ಸೇವಾ ಆಯೋಗದ ಕರ್ತವ್ಯವಾಗಿರುವುದು:

ಆದರೆ, ಸಾಮಾನ್ಯವಾದ ಅಥವಾ ಯಾವುದೇ ವಿಶೇಷ ವಿಷಯದಲ್ಲಿ ಅಥವಾ ವಿಶೇಷ ವರ್ಗದ ವಿಷಯದಲ್ಲಿ ಅಥವಾ ವಿಶೇಷ ಸನ್ನಿವೇಶದಲ್ಲಿ ಲೋಕ ಸೇವಾ ಆಯೋಗದೊಂದಿಗೆ ಸಮಾಲೋಚಿಸುವುದು ಅಗತ್ಯವಿಲ್ಲದ ವಿಷಯಗಳು ಯಾವುವೆಲ್ಲಾ ಎಂಬುದನ್ನು ವ್ಯಕ್ತಪಡಿಸುವ ನಿಯಮಗಳನ್ನು ಸರಕಾರಕ್ಕೆ ರಚಿಸಬಹುದಾಗಿದೆ.

(3) ಲೋಕ ಸೇವಾ ಆಯೋಗ ಮತ್ತು ವಕ್ಫ್ ಬೋರ್ಡಿನೊಳಗೆ ಯಾವುದೇ ಭಿನ್ನಾಭಿಪ್ರಾಯವಿರುವಲ್ಲಿ, ವಕ್ಫ್ ಮಂಡಳಿಯು ಆ ವಿಷಯವನ್ನು ಸರಕಾರಕ್ಕೆ ರೆಫರ್ ಮಾಡತಕ್ಕದ್ದು ಹಾಗು ಅದರ ಮೇಲಿನ ಸರಕಾರದ ತೀರ್ಮಾನ ಅಂತಿಮವಾಗಿರುವುದಾಗಿದೆ:

ಆದರೆ, ಲೋಕ ಸೇವಾ ಆಯೋಗದ ವಿರುದ್ಧವಾಗಿ ಒಂದು ತೀರ್ವಾನ ಕೈಗೊಳ್ಳುವುದಕ್ಕೆ ಮುಂಚಿತವಾಗಿ ಸರಕಾರವು ಆ ವಿಷಯವನ್ನು ಲೋಕ ಸೇವಾ ಆಯೋಗಕ್ಕೆ ರೆಫರ್ ಮಾಡತಕ್ಕದ್ದಾಗಿದೆ.

4. <u>ನಿಯಮಗಳನ್ನು ರಚಿಸುವುದಕ್ಕಿರುವ ಅಧಿಕಾರ.</u>—(1) ಸರಕಾರಕ್ಕೆ, ಈ ಅಧ್ಯಾದೇಶದ ಉದ್ದೇಶಗಳನ್ನು ಜಾರಿಗೆ ತರುವುದಕ್ಕಾಗಿ, ಲೋಕ ಸೇವಾ ಆಯೋಗದೊಂದಿಗೆ ಹಾಗು ವಕ್ಫ್ ಬೋರ್ಡಿನೊಂದಿಗೆ ಸಮಾಲೋಚಿಸಿ, ನಿಯಮಗಳನ್ನು ರಚಿಸಬಹುದಾಗಿದೆ.

(2) ಪ್ರತ್ಯೇಕವಾಗಿ, ಮೇಲೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಭಂಗವಾಗದಂತೆ, ಅಂತಹ ನಿಯಮಗಳಲ್ಲಿ,—

(ಎ) ಲೋಕ ಸೇವಾ ಆಯೋಗದೊಂದಿಗೆ ಸಮಾಲೋಚಿಸುವುದಕ್ಕೆ ವಕ್ಫ್ ಬೋರ್ಡು ಪಾಲಿಸಬೇಕಾದ ಕಾನೂನು ಕ್ರಮ;

(ಬಿ) ಲೋಕ ಸೇವಾ ಆಯೋಗದೊಂದಿಗೆ ಸಮಾಲೋಚಿಸುವ ಉದ್ದೇಶಕ್ಕಾಗಿ ಆನುಷಾಂಗಿಕವಾದುದೋ ಅವಶ್ಯಕವಾದುದೋ ಆದ ಯಾವುದೇ ವಿಷಯಕ್ಕೆ; ವ್ಯವಸ್ಥೆಮಾಡಬಹುದಾಗಿದೆ.

(3) ಈ ಅಧ್ಯಾದೇಶದ ಪ್ರಕಾರ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ನಂತರ, ಆದಷ್ಟು ಬೇಗನೇ, ವಿಧಾನಸಭೆಯು ಅಧಿವೇಶನದಲ್ಲಿರುವಾಗ ಅದರ ಸಮಕ್ಷದಲ್ಲಿ, ಅದನ್ನು ಒಂದು ಅಧಿವೇಶನದಲ್ಲೋ ಮುಂದುವರಿದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳಬಹುದಾದ ಒಟ್ಟು ಹದಿನಾಲ್ಕು ದಿವಸಕ್ಕೆ ಮಂಡಿಸತಕ್ಕದ್ದು ಮತ್ತು ಆ ರೀತಿ ಮಂಡಿಸಿದ ಅಧಿವೇಶನ ಅಥವಾ ನಿಕಟಾನಂತರದ ಅಧಿವೇಶನ ಕೊನೆಗೊಳ್ಳುವ ಮುಂಚಿತವಾಗಿ, ವಿಧಾನಸಭೆಯು ಆ ನಿಯಮದಲ್ಲಿ ಯಾವುದೇ ಬದಲಾವಣೆ ಮಾಡುವುದೋ ಅಲ್ಲದಿದ್ದಲ್ಲಿ ಆ ನಿಯಮವನ್ನು ರಚಿಸಬೇಕಿಲ್ಲವೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ, ಆ ನಿಯಮಕ್ಕೆ ಅನಂತರ, ಆಯಾಯ ವಿಷಯದಂತೆ, ಆ ರೀತಿ ಬದಲಾವಣೆಮಾಡಿದ ರೀತಿಯಲ್ಲಿ ಮಾತ್ರ ಪರಿಣಾಮವಿರುವುದು ಅಲ್ಲದಿದ್ದಲ್ಲಿ ಯಾವುದೇ ಪರಿಣಾಮ ಇಲ್ಲದಾಗುವುದಾಗಿದೆ; ಹಾಗಿದ್ದರೂ ಅಂತಹ ಯಾವುದೇ ಬದಲಾವಣೆಯೋ ರದ್ದುಗೊಳಿಸುವಿಕೆಯೋ ಆ ನಿಯಮ ಪ್ರಕಾರ ಹಿಂದೆ ಮಾಡಿದುದರ ಸಿಂಧುತ್ವಕ್ಕೆ ಭಂಗಬರದ ರೀತಿಯಲ್ಲಿ ಆಗಿರತಕ್ಕದ್ದು.

5. ರದ್ಧತಿ ಮತ್ತು ರಕ್ಷಣೆ.—(1) 2017ರ ಕೇರಳ ಲೋಕ ಸೇವಾ ಆಯೋಗ (ವಕ್ಫ್ ಬೋರ್ಡಿನ ಕೆಳಗಿನ ಸೇವೆಗಳಿಗೆ ಸಂಬಂಧಿಸಿ ಹೆಚ್ಚುವರಿ ಕರ್ತವ್ಯಗಳು) ಅಧ್ಯಾದೇಶ (2017ರ 29)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧ್ಯಾದೇಶದ ಪ್ರಕಾರ ಮಾಡಿರುವುದಾಗಿಯೋ ಕೈಗೊಂಡಿರುವುದಾಗಿಯೋ ಭಾವಿಸತಕ್ಕದ್ದು.

**ಪಿ. ಸದಾಶಿವಂ,**

ರಾಜ್ಯಪಾಲರು.